**ಓ ಎಸ್ 24/2023 ಡಿ ಡಬ್ಲ್ಯೂ2**

**ಸಾಕ್ಷಿಯನ್ನು ದಿಃ 04.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ**

ನಮ್ಮ ತಂದೆಯ ಹೆಸರು ಕೆ ಎನ್ .ಗೋಪಾಲಸ್ವಾಮಿ. ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೆ ನಂಬರು ನನಗೆ ಗೊತ್ತಿಲ್ಲ. ಸರ್ವೆ ನಂ. 43/2-ಪಿ11 ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. 1 ನೇ ಪ್ರತಿವಾದಿಯು ನಮ್ಮ ತಾಯಿಯಾಗಿದ್ದು 3 ಮತ್ತು 4 ನೇ ಪ್ರತಿವಾದಿಗಳು ನನ್ನ ಸಹೋದರಿಯರಾಗಿದ್ದಾರೆ. ನಮ್ಮ ತಂದೆ ಕೆ ಎನ್ ಗೋಪಾಲಸ್ವಾಮಿರವರು ಮೃತಪಟ್ಟಿರುವುದರಿಂದ ನಾವು 4 ಜನ ಅಂದರೆ 1 ರಿಂದ 4 ನೇ ಪ್ರತಿವಾದಿಗಳು ಮಾತ್ರ ಅವರ ವಾರಸುದಾರರಾಗಿದ್ದೇವೆ ಎಂದರೆ ಸರಿ.

ನಮ್ಮ ತಂದೆ ಕೆ.ಎನ್.ಗೋಪಾಲಸ್ವಾಮಿರವರು ಬದುಕಿದ್ದಾಗ ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ದಿನಾಂಕ 24.02.2018 ರಂದು ವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ದಾವಾ ಆಸ್ತಿಯನ್ನು ರೂ.20 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿ ಕರಾರು ಪತ್ರ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಹಾಗೆ ಕರಾರು ಮಾಡಿಕೊಳ್ಳುವ ಕಾಲಕ್ಕೆ ನಮ್ಮ ತಂದೆಯು ಆರ್ ಟಿ ಜಿ ಎಸ್ ಮೂಲಕ ಮತ್ತು ನಗದು ರೂಪದಲ್ಲಿ ರೂ. 7,01,000/- ಹಣವನ್ನು ವಾದಿಯಿಂದ ಪಡೆದುಕೊಂಡು ಆ ಸಂಗತಿಯನ್ನು ಕ್ರಯದ ಕರಾರು ಪತ್ರದಲ್ಲಿ ನಮೂದಿಸಿ ಸಾಕ್ಷಿದಾರರ ಸಮಕ್ಷಮ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಆ ಸಂಗತಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ 11 ಇ ಸ್ಕೆಚ್ ಮಾಡಿಸಿಕೊಂಡು ಇನ್ನಿತ ಅವಶ್ಯಕ ದಾಖಲೆಗಳನ್ನು ಕ್ರೂಢೀಕರಿಸಿಕೊಂಡ ನಂತರ ಕ್ರಯಪತ್ರವನ್ನು ಬರೆದುಕೊಡುವುದಾಗಿ ನಮ್ಮ ತಂದೆಯು ವಾದಿಗೆ ಹೇಳಿದ್ದರು ಎಂದರೆ ಕ್ರಯದ ಕರಾರು ಪತ್ರದ ವ್ಯವಹಾರದ ಸಂಗತಿಗಳೇ ನನಗೆ ಗೊತ್ತಿಲ್ಲ. ಹಾಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟ ನಂತರ

ಪುನಃ ಕಾಲಾವಕಾಶ ಕೋರಿ ನಮ್ಮ ತಂದೆಯು ವಾದಿಯ ಹೆಸರಿಗೆ ದಿನಾಂಕ 19.09.2019 ರಂದು ಪೂರಕ ಕ್ರಯದ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಆ ಕ್ರಯದ ಕರಾರು ಪತ್ರದ ವ್ಯವಹಾರದ ಸಂಗತಿಗಳೇ ನನಗೆ ಗೊತ್ತಿಲ್ಲ. ಹಾಗೆ ಪೂರಕ ಕ್ರಯದ ಕರಾರು ಪತ್ರ ಬರೆದುಕೊಡುವಾಗ ಪುನಃ ರೂ. 7 ಲಕ್ಷ ಹಣವನ್ನು ಆರ್ ಟಿ ಜಿ ಎಸ್ ಮತ್ತು ನಗದು ರೂಪದಲ್ಲಿ ಪಡೆದುಕೊಳ್ಳುವ ಮೂಲಕ ಒಟ್ಟಾರೆಯಾಗಿ ರೂ.14,01,000/- ಹಣವನ್ನು ನಮ್ಮ ತಂದೆಯು ವಾದಿಯಿಂದ ಪಡೆದುಕೊಂಡಿದ್ದಾರೆ ಎಂದರೆ ಆ ಕ್ರಯದ ಕರಾರು ಪತ್ರದ ವ್ಯವಹಾರದ ಸಂಗತಿಗಳೇ ನನಗೆ ಗೊತ್ತಿಲ್ಲ. ಸದರಿ ಪೂರಕ ಕ್ರಯದ ಕರಾರು ಪತ್ರದ ಅನುಸಾರ ಕ್ರಮಬದ್ಧ ಕ್ರಯಪತ್ರ ಬರೆದುಕೊಡಲು 6 ತಿಂಗಳ ಕಾಲಾವಕಾಶವನ್ನು ನಮ್ಮ ತಂದೆಯು ವಾದಿಯಿಂದ ಪಡೆದುಕೊಂಡಿದ್ದರು ಆ ಕ್ರಯದ ಕರಾರು ಪತ್ರದ ವ್ಯವಹಾರದ ಸಂಗತಿಗಳೇ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**